ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 1576
2. ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ (ಸ್ಥಳೀಯ ಸಂಸ್ಥೆಯಿಂದ ಚುನಾಯಿತರಾದವರು)
3. ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು
4. ಉತ್ತರಿಸಬೇಕಾದ ದಿನಾಂಕ : 24-09-2021

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಾಫಿ ಬೆಳೆಗಾರರು ಸರಿಯಾದ ಬೆಲೆ ಮತ್ತು ಹವಮಾನ ವೈಪರೀತ್ಯದಿಂದ ಸಂಕಷ್ಟಕ್ಕೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಸರ್ಕಾರದ ಪರಿಹಾರಗಳೇನು; (ವಿವರ ನೀಡುವುದು) | ಬಂದಿದೆ.<br>ಕಾಫಿ ಬೆಳೆಗಾರರನ್ನು ಬೆಂಬಲಿಸಲು ಕಾಫಿ ಮಂಡಳಿಯಿಂದ 10 ಹೆ ಪ್ರದೇಶದ ವರೆಗಿನ ಸಣ್ಣ ರೈತರಿಗೆ ಈ ಕೆಳಕಂಡ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಹಾಯಧನವನ್ನು ಕಲ್ಪಿಸಲಾಗಿರುತ್ತದೆ.<br>• ಕಾಫಿ ತೋಟಗಳ ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸಲು ಕಾಫಿ ತೋಟಗಳ ಮರುಸ್ಥಾಪನೆ ಕಾರ್ಯಕ್ರಮದಡಿ ಹಳೆಯ ಮತ್ತು ಅನುತ್ಪಾದಕ ಕಾಫಿ ಗಿಡಗಳನ್ನು ತೆಗೆದು ಅಧಿಕ ಇಳುವರಿ ನೀಡುವ ಮತ್ತು ರೋಗ ನಿರೋಧಕ ಕಾಫಿ ತಳಿಗಳ ಗಿಡಗಳನ್ನು ನಾಟಿ ಘಟಕ ವೆಚ್ಚದ ಶೇ.40 ರಷ್ಟು ಸಹಾಯಧನವನ್ನು ಕಲ್ಪಿಸಲಾಗಿರುತ್ತದೆ.<br>• ನೀರು ಸಂಗ್ರಹಣಾ ಘಟಕಗಳ ನಿರ್ಮಾಣಕ್ಕೆ ಹಾಗೂ ಉಪಕರಣಗಳ ಖರೀದಿಗೆ ಘಟಕ ವೆಚ್ಚದ ಶೇ.40 ರಷ್ಟು ಸಹಾಯಧನವನ್ನು ಕಲ್ಪಿಸಲಾಗಿರುತ್ತದೆ.<br>• ಕಾಫಿ ಬೆಳೆಗಾರರು ಹೆಚ್ಚಿನ ಆದಾಯ ಗಳಿಸಲು ಪರಿಸರ ಪ್ರಮಾಣಿತ ಕಾಫಿ ಉತ್ಪಾದನೆಗೆ ಪ್ರೋತ್ಸಾಹಿಸಲು ಪರಿಸರ ಪ್ರಮಾಣಿತ ವೆಚ್ಚದ ಶೇ. 50 ರಷ್ಟು ಭರಿಸಲಾಗುತ್ತದೆ.<br>• ಸಮುದಾಯ ಭಾಗಿತ್ವದಲ್ಲಿ ಕಾಫಿ ಮಾರಾಟಕ್ಕೆ ಉತ್ತೇಜಿಸುವ ಸಲುವಾಗಿ ಸಣ್ಣ ರೈತರ ಗುಂಪು/ಸ್ವಸಹಾಯ ಸಂಘ / ಸಹಕಾರಿ ಮಾರಾಟ ಸಂಸ್ಥೆಗಳಿಗೆ ಪ್ರತಿ ಕೆ.ಜಿ. ಕಾಫಿಗೆ ರೂ.4.00 ಗಳನ್ನು ಬೆಂಬಲ ಬೆಲೆಯಾಗಿ ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ.<br>ಅತೀವೃಷ್ಟಿ ಹಾಗೂ ಪ್ರವಾಹದಿಂದ ಹಾನಿಯಾದ ಕಾಫಿ ಬೆಳೆಗಾರರಿಗೆ SDRF/ NDRF ಮಾರ್ಗಸೂಚಿಯನ್ವಯ ರೂ.೧೮೦೦೦/ಹೆ. ನಂತೆ ಗರಿಷ್ಠ ೨ಹೆ. ವರೆಗೆ ಪರಿಹಾರದ ಮೊತ್ತವನ್ನು ಕಂದಾಯ ಇಲಾಖೆಯ ಮೂಲಕ ವಿತರಿಸಲಾಗುತ್ತದೆ. |
| ಆ) | ಕೇರಳ ರಾಜ್ಯದಲ್ಲಿ ಕಾಫಿ ಬೆಳೆಗೆ ಬೆಂಬಲ ಬೆಲೆ ನೀಡಲಾಗುತ್ತಿದ್ದು, ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲೂ ಬೆಂಬಲ ಬೆಲೆ ನೀಡಲು ಸರ್ಕಾರದ ಕ್ರಮಗಳೇನು? (ವಿವರ ನೀಡುವುದು) | ಬೆಂಬಲ ಬೆಲೆ ನಿಗಧಿ ಪಡಿಸಿರುವುದಿಲ್ಲ. |

No.HORTI 439 HGM 2021

(ಮುನಿರತ್ನ)
ತೋಟಗಾರಿಕೆ ಮತ್ತು ಯೋಜನೆ/ ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.